# ಸಂಕಲನಾತ್ಮಕ ಮೌಲ್ಯಮಾಪನ-1

ಅಂಕಗಳು:-80

ತರಗತಿ:- 9ನೇ ತರಗತಿ ವಿಷಯ:- ಸಮಾಜ ವಿಜ್ಞಾನ ಸಮಯ-3 ಗಂಟೆ

## I. ಈ ಕೆಳಗಿನ ಬಹುಆಯ್ಕೆ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ: 8X1=8

1. ಏಸುಕ್ರಿಸ್ತರು ಹುಟ್ಟಿದ ಸ್ಥಳ
   ಎ) ಮೆಕ್ಕಾ ಬಿ) ಬೆತ್ಲಹ್ಯಾಂ ಸಿ) ಮದೀನಾ ಡಿ) ರೋಮ್
2. ಕಂಪಣನ ದಂಡಯಾತ್ರೆಯ ಬಗ್ಗೆ ತಿಳಿಸುವುದು
   ಎ) ಶಿವತತ್ವ ಚಿಂತಾಮಣಿ ಬಿ) ಬಸವ ಪುರಾಣ ಸಿ) ಪ್ರಭುಲಿಂಗಲೀಲೆ ಡಿ)ಮಧುರಾವಿಜಯಂ
3. ಸಂವಿಧಾನ ರಚನಾ ಸಭೆಯ ಅಧ್ಯಕ್ಷರು
   ಎ) ಬಾಬು ರಾಜೇಂದ್ರ ಪ್ರಸಾದ್ ಬಿ) ಅಂಬೇಡ್ಕರ್ ಸಿ) ಜವಹರ್ ಲಾಲ್ ನೆಹರು ಡಿ) ಗಾಂಧೀಜಿ
4. ಸಮಾಜದ ಜೀವಕೋಶ
   ಎ) ಕುಟುಂಬ ಬಿ) ಶಾಲೆ ಸಿ) ಗ್ರಾಮ ಡಿ) ರಾಜ್ಯ
5. ಕೇಂದ್ರ ಕುಟುಂಬದಲ್ಲಿ ಕಂಡುಬರುವ ಲಕ್ಷಣ
   ಎ) ವಾಸಸ್ಥಳ ಬಿ) ದೊಡ್ಡ ಗಾತ್ರ ಸಿ) ಚಿಕ್ಕ ಗಾತ್ರ ಡಿ) ಅಧಿಕಾರ ಸಂರಚನೆ
6. ಕರ್ನಾಟಕ ಎಂದು ಮರುನಾಮಕರಣ ಮಾಡಿದ ವರ್ಷ
   ಎ) 1963 ಬಿ) 1973 ಸಿ) 1985 ಡಿ) 1992
7. ತೃತೀಯ ವಲಯಕ್ಕೆ ಉದಾಹರಣೆ
   ಎ) ಕೈಗಾರಿಕೆ ಬಿ) ಕೃಷಿ ಸಿ) ಹೈನುಗಾರಿಕೆ ಡಿ) ಬ್ಯಾಂಕಿಂಗ್
8. ನಿರ್ವಹಣೆಯ ತತ್ವಗಳನ್ನು ನೀಡಿದವರು
   ಎ) ಹೆನ್ರಿ ಫಯೋಲ್ ಬಿ) ಪ್ರೊ. ಕೋಲಿನ್ ಕ್ಲಾರ್ಕ್ ಸಿ) ಅಮರ್ತ್ಯ ಸೇನ್ ಡಿ) ಬಾಲ್ಡವಿನ್

## II. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯಗಳಲ್ಲಿ ಉತ್ತರಿಸಿರಿ: 8X1=8

9. ಮೊದಲ ಪಾಣಿಪತ್ ಕದನ ಯಾವಾಗ ನಡೆಯಿತು?
10. ಮಧ್ವಾಚಾರ್ಯರು ಪ್ರತಿಪಾದಿಸಿದ ಸಿದ್ಧಾಂತ ಯಾವುದು?
11. ಸರ್ವೋಚ್ಚ ನ್ಯಾಯಾಲಯವು ಯಾವಾಗ ಅಸ್ತಿತ್ವಕ್ಕೆ ಬಂದಿತು?
12. ಕುಟುಂಬವನ್ನು ಅರ್ಥೈಸಿ.
13. ಬೇಸಿಗೆ ಕಾಲವು ಯಾವ ತಿಂಗಳುಗಳಲ್ಲಿ ಇರುತ್ತದೆ?
14. ಸಾಗುವಳಿಗೆ ಲಭ್ಯವಿಲ್ಲದ ಭೂಮಿಗೆ ಉದಾಹರಣೆ ಕೊಡಿ.
15. ಪ್ರಾಥಮಿಕ ವಲಯವನ್ನು ವ್ಯಾಖ್ಯಾನಿಸಿ.
16. ನಿರ್ಧಾರ ಕೈಗೊಳ್ಳುವುದು ಎಂದರೇನು?

## III. ಈ ಕೆಳಗಿನ ಪ್ರಶ್ನೆಗಳಿಗೆ ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿರಿ: 8X2=16

17. ಮೊಹಮ್ಮದ್-ಬಿನ್-ತುಘಲಕ್ ಜಾರಿಗೊಳಿಸಿದ ಆಡಳಿತ ಸುಧಾರಣೆಗಳಾವುವು?
18. ವಿಜಯನಗರ ಸಾಮ್ರಾಜ್ಯವನ್ನು ಆಳಿದ ನಾಲ್ಕು ರಾಜ ಮನೆತನಗಳನ್ನು ಹೆಸರಿಸಿ.
19. ಸಂವಿಧಾನದಲ್ಲಿ ಅಳವಡಿಸಿರುವ ಮೂಲಭೂತ ಹಕ್ಕುಗಳಾವುವು?

    ಅಥವಾ

    ಲೋಕಸಭೆಯ ಸದಸ್ಯರಾಗಲು ಇರಬೇಕಾದ ಅರ್ಹತೆಗಳು ಯಾವುವು?
20. ಕುಟುಂಬವು ಸಮಾಜದ ಘಟಕ ಹೇಗೆ?

    ಅಥವಾ

    ಕುಟುಂಬದ ಪ್ರಕಾರಗಳಾವುವು?

21. ಕರ್ನಾಟಕದ ನಾಲ್ಕು ಆಡಳಿತ ವಿಭಾಗಗಳಾವುವು?

22. ಕಾವೇರಿ ನದಿಯ ಉಪನದಿಗಳಾವುವು?

23. ಆದಾಯದ ಮೂಲಗಳು ಯಾವುವು?

24. ನಿಯಂತ್ರಣದ ಪ್ರಮುಖ ಧ್ಯೇಯಗಳೇನು?

**IV. ಈ ಕೆಳಗಿನ ಪ್ರಶ್ನೆಗಳಿಗೆ ಐದು ಆರು ವಾಕ್ಯಗಳಲ್ಲಿ ಉತ್ತರಿಸಿರಿ: 9X3=27**

25. ಜೀಸಸ್‌ಕ್ರಿಸ್ತರ ಬೋಧನೆಗಳನ್ನು ವಿವರಿಸಿ.

ಅಥವಾ

ದೆಹಲಿ ಸುಲ್ತಾನರು ಕಲೆ ಮತ್ತು ವಾಸ್ತುಶಿಲ್ಪ ಕ್ಷೇತ್ರಕ್ಕೆ ಅಮೂಲ್ಯ ಕೊಡುಗೆಗಳನ್ನು ನೀಡಿದ್ದಾರೆ. ಹೇಗೆ ಸ್ಪಷ್ಟೀಕರಿಸಿರಿ.

26. ಅದ್ವೈತ ಸಿದ್ದಾಂತವನ್ನು ಕುರಿತು ವಿವರಿಸಿ.

27. ಕೃಷ್ಣದೇವರಾಯನು ಅಧಿಕಾರಕ್ಕೆ ಬಂದಾಗ ಎದುರಿಸಿದ ಸಮಸ್ಯೆಗಳಾವುವು?

28. ರಾಜ್ಯಸಭೆಯ ರಚನೆಯನ್ನು ವಿವರಿಸಿ.

ಅಥವಾ

ರಾಜ್ಯಪಾಲರ ಅರ್ಹತೆ, ಅಧಿಕಾರ ಅವಧಿಯನ್ನು ವಿವರಿಸಿ.

29. ಅವಿಭಕ್ತ ಕುಟುಂಬದ ಲಕ್ಷಣಗಳಾವುವು?

30. ಮಲೆನಾಡು ಪ್ರದೇಶದ ಲಕ್ಷಣಗಳನ್ನು ಪಟ್ಟಿಮಾಡಿರಿ.

31. ಕರ್ನಾಟಕವನ್ನು ಶ್ರೀಗಂಧದ ನಾಡು ಎಂದು ಏಕೆ ಕರೆಯುತ್ತಾರೆ?

ಅಥವಾ

ನಮ್ಮ ರಾಜ್ಯದ ಪ್ರಮುಖ ಜಲವಿದ್ಯುತ್ ಉತ್ಪಾದನಾ ಕೇಂದ್ರಗಳನ್ನು ಹೆಸರಿಸಿ.

32. ಭಾರತೀಯ ಕೃಷಿ ವಲಯದ ಪ್ರಾಮುಖ್ಯತೆಯನ್ನು ವಿವರಿಸಿ.

33. ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾದ ಸಂದರ್ಭಗಳಲ್ಲಿ ಗಮನದಲ್ಲಿಟ್ಟುಕೊಳ್ಳಬೇಕಾದ ಅಂಶಗಳನ್ನು ವಿವರಿಸಿ.

**V. ಈ ಕೆಳಗಿನ ಪ್ರಶ್ನೆಗೆ ಎಂಟು ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ: 4X4=16**

34. ಮಹಮ್ಮದ್ ಗವಾನನು ಬಹಮನಿ ರಾಜ್ಯದಲ್ಲಿ ಉತ್ತಮ ಪ್ರಧಾನಮಂತ್ರಿ ಎಂದು ಹೇಗೆ ಪರಿಗಣಿಸುವಿರಿ.?

ಅಥವಾ

ರಜಪೂತ ಅರಸರು ಸಾಹಿತ್ಯ ಕ್ಷೇತ್ರಕ್ಕೆ ನೀಡಿದ ಕೊಡುಗೆ ವಿವರಿಸಿ.

35. ಮೊಹಮ್ಮದ್ ಪೈಗಂಬರರ ಜೀವನವನ್ನು ತಿಳಿಸಿರಿ.

36. ನಮ್ಮ ಸಂವಿಧಾನದ ಪ್ರಮುಖ ಲಕ್ಷಣಗಳನ್ನು ವಿವರಿಸಿ.

37. ಕರ್ನಾಟಕದ ಮಳೆಗಾಲವನ್ನು ಕುರಿತು ಬರೆಯಿರಿ.

**VI .** 38.. ಕರ್ನಾಟಕದ ನಕ್ಷೆಯನ್ನು ರಚಿಸಿ ಇವುಗಳನ್ನು ಗುರುತಿಸಿ. 1+4=5

ಎ)ಕರಾವಳಿ ಮೈದಾನ ಬಿ)ಮಲೆನಾಡು ಪ್ರದೇಶ ಸಿ)ಉತ್ತರ ಮೈದಾನ ಪ್ರದೇಶ ಡಿ)ದಕ್ಷಿಣ ಮೈದಾನ ಪ್ರದೇಶ